ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಶ್ರೀ ಧರ್ಮಸಿಂಗ್ ಮತ್ತು ಶ್ರೀ ಪನ್ನಾಲಾಲ್ ಅಷ್ಟೇ ಅಲ್ಲ. ಇನ್ನುಳಿದ ಕಂಟ್ರಾಕ್ಟರುಗಳ ಹೆಸರುಗಳನ್ನು ನಾನು ಕೊಟ್ಟಿದ್ದೇನೆ. ಅದೆಲ್ಲಾ ಲಿಸ್ಟ್‌ನಲ್ಲಿ ಇವೆ. ಮಾನ್ಯ ಸದಸ್ಯರು ಅದನ್ನು ನೋಡಬೇಕು, ಶ್ರೀ ನಾಗಪ್ಪ ಮಂತ್ರಿತರರು ಇದ್ದಾರೆ. ಅವರಮೇಲೆ ನಾವು ಈಗಾಗಲೇ ಕ್ರಮ ಕೈಕೊಂಡಿದ್ದೇವೆ.

ಶ್ರೀ ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಲ್ಲಿ ಕೊಟ್ಟಿರತಕ್ಕಂಥ ಲಿಖಿತ ಉತ್ತರದಲ್ಲಿ ಅಲ್ಪ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಯ ಉಗ್ರಾಣಕ್ಕೆ ತಲುಪಿರುವುದಿಲ್ಲ ಎಂದು ಹೇಳಿದ್ದಾರೆ. ಯಾವ್ಯಾವ ಕಾರ್ಖಾನೆಗಳಿಂದ ಎಷ್ಟೆಷ್ಟು ಸಿಮೆಂಟ್ ಉಗ್ರಾಣಕ್ಕೆ ತಲುಪಿರುವುದಿಲ್ಲ ಎನ್ನುವ ಬಗ್ಗೆ ಅವರು ಉತ್ತರವನ್ನು ಕೊಡಬೇಕು ಮತ್ತು ಗುಪ್ತ ದಳದಿಂದ ತನಿಖೆಯನ್ನು ಪ್ರಾರಂಭಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ, ೨ ಸಾವಿರ ಚೀಲ್ಲರೆ ಸಿಮೆಂಟ್ ಮತ್ತು ಕಬ್ಬಿಣ ಕೂಡ ಕೃಷ್ಣ ಮೇಲ್ದಂಡೆ ಯೋಜನೆಗೆ ಬಂದಿಲ್ಲ ಎಂದು ಹೇಳಿದ್ದಾರೆ. ಹಾಗೆ ಬರದಿದ್ದರೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು. ನಾರಾಯಣಪುರ ಡ್ಯಾಮ್ ಪಂಗಿದಿದೆ. ಅದಕ್ಕೆ ಸಿಮೆಂಟ್ ಮತ್ತು ಕಬ್ಬಿಣದ ಸರಬರಾಜು ಕಡಿಮೆಯಾಯಿತು, ಆದರೂ ವರ್ಕ್ ಎಲ್ಲಾ ಆಯಿತು ಎಂದು ಹೇಳಿದರು. ಅದು ಯಾವ ರೀತಿ ಆಯಿತು ಎಂಬುದನ್ನು ಮಾನ್ಯ ಸಚಿವರು ವಿವರವಾಗಿ ಉತ್ತರಿಸಬೇಕು

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಹಾಕಿದರೆ ನಾನು ವಿವರವಾದ ಉತ್ತರವನ್ನು ಕೊಡುತ್ತೇನೆ.

SRI PRABHAKAR TELKAR.—About 3,000 tonnes of cement has gone outside. So, whether the Government has taken steps to recoup or bring that 3,000 tonnes of cement in order to see that works do not suffer. Whether any alternative arrangement have been made ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಪೂರ್ತಿಯಾಗಿ ಎಲ್ಲಾ ಹೊರಗೆ ಹೋಗುತ್ತಾ ಇಲ್ಲ. ಈಗ ಹಿಡಿದಿರತಕ್ಕಂಥ ಸಿಮೆಂಟ್ ಏನು ಇದೆ ಅದರಲ್ಲಿ ಸ್ವಲ್ಪ ಪೋಲೀಸ್ ಕಸ್ಟಡಿಯಲ್ಲಿದೆ, ಇನ್ನೂ ಕೂಡ ಸೀಜ್ ಮಾಡುತ್ತಾ ಇದ್ದೇವೆ.

ಶ್ರೀ ಪ್ರಭಾಕರ್ ತೇಲ್ಕರ್.— ಈಗ ನಮ್ಮಲ್ಲಿರತಕ್ಕಂಥಾ ಸಿಮೆಂಟನ್ನಾದರೂ ತಕ್ಷಣ ರಿಲೀಸ್ ಮಾಡಿ ಉಪಯೋಗಿಸಿಕೊಳ್ಳಬೇಕು ಇಲ್ಲದೇ ಹೋದರೆ ಅಲ್ಲಿ ವರ್ಕ್ ಸಫರ್ ಆಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ವರ್ಕ್ ಸಫರ್ ಆಗದೇ ಇದ್ದ ಹಾಗೆ ಅದಕ್ಕೆ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ಸ್ ಮಾಡಿದ್ದೇವೆ.

ಶ್ರೀ ಗಂಗಣ್ಣ.— ಅಲ್ಪ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಯ ಉಗ್ರಾಣಕ್ಕೆ ತಲುಪಿರುವುದಿಲ್ಲ ಅಂತ ಹೇಳಿದ್ದೀರಿ. ಹಾಗಾದರೆ ಆ ಅಲ್ಪ ಪ್ರಮಾಣದ ಕಾರ್ಖಾನೆಗಳು ಯಾವ್ಯಾವುವು ಎನ್ನುವುದನ್ನು ತಿಳಿಸುತ್ತೀರಾ .

ಶ್ರೀ ಬಿ. ಬಿ. ಚಿಮ್ಮನಕಟ್ಟಿ— ಮಾನ್ಯ ಸದಸ್ಯರು ಯಾವ್ಯಾವ ಅಲ್ಪ ಪ್ರಮಾಣದ ಸಿಮೆಂಟ್ ಫ್ಯಾಕ್ಟರಿ ಅಂತ ತಿಳಿಸಿದ್ದರೆ ಅದರ ವಿವರ ಕೊಡಬಹುದಾಗಿತ್ತು. ಅವರು ತಿಳಿಸಿಲ್ಲಾ. ಆದುದರಿಂದ ಬೇರೆ ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ತಿಳಿಸುತ್ತೇನೆ.

ಪ್ರಶ್ನೆ ೬೫೬ (೧೨೯೧)—ಶ್ರೀ ಹೆಚ್. ಡಿ. ದೇವೇಗೌಡ ಹೆಲ್ಡ್ ಓವರ್

Seniority List of Assistants in Karnataka Government Secretariat.

1326 SRI G.K. SUBBAIAH (Virajpet).—Will the Chief Minister be pleased to state.—

(a) whether it is a fact that the seniority list of Assistants in Karnataka Government Secretariat is being reviewed.

(b) whether it is a fact that all the promotees in Assistant cadre as on 1-1-1974 have become Supernumeratory.

(c) the number of excess promotions made and whether all these persons are given direct recruitment quota, if so, on what basis.

(d) whether it is a fact that the High Court in its Judgement has directed the State Government to fix the seniority as between the Petitioners and respondents 2 to 109 only. in the manner indicated in the Judgement.

(e) how it affects the other persons in the seniority list of 1975.

(f) the number of years these promotees have served in lower cadre, and whether these promotees have been given direct recruitment quota.

(g) the criteria in preparation of seniority list and whether the date of appointment considered as basis to determine the seniority, if not, the reasons therefor?

SRI R. GUNDU RAO (Chief Minister).—

(a) It is persumed that the Member is referring to the gradation list of Assistants that is being prepared as per the directions of the High Court in Writ Petition No. 4614/76 filed by Sri H.M. Chikkabasavaiah. If so, it is a fact that the gradation list of Assistants is being re-done as directed by the High Court.

(b) It is not a fact that all the promotees to the cadre of Assistants as on 1-1-1974 have become Supernumeratory.

(c) Excess number of promotions made to the cadre of Assistants from 18-11-1957 till 31-12-1979 is 198. These persons being promotees, giving them direct recruitment quota does not arise as per rules.

(d) No.

(e) Seniority list is to be prepared applying the provisions made in the relevant rules, and in the process seniority of all the persons involved will get affected.,

(f) The question is vague. As already stated above the question of giving direct recruitment quota to promotees, does not arise.

(g) Criteria in preparing the seniority list is as laid down in the connected rules and the directions of the High Court in Writ Petition referred to above. Date of appointment has been considered as the basis to determine the seniority as per the rules.

ಶ್ರೀ ಜಿ. ಕೆ. ಸುಬ್ಬಯ್ಯ.—ಈ ಪ್ರಶ್ನೆಯ (ಉ)ಗೆ ಉತ್ತರವಾಗಿ ಸಂಬಂಧಪಟ್ಟ ನಿಯಮಗಳಲ್ಲಿನ ಅವಕಾಶಗಳನ್ನು ಅನುಸರಿಸಿ ಸೇವಾ ಹಿರಿತನ ಪಟ್ಟಿಯನ್ನು ತಯಾರಿಸಬೇಕಾಗಿದೆ. ಹಾಗೂ ಕಾರ್ಯ

ವಿಧಾನದಲ್ಲಿ ಸೇವಾ ಹಿರಿತನಕ್ಕೆ ಸಂಬಂಧಪಟ್ಟ ಎಲ್ಲರಿಗೂ ತೊಂದರೆ ಉಂಟಾಗುತ್ತದೆ. ಅಂತ ಹೇಳಿದ್ದೀರಿ. ಮತ್ತು ಇದೇ ಪ್ರಶ್ನೆಯ (ಊ)ಗೆ ಉತ್ತರ ಅಸ್ಪಷ್ಟವಾಗಿದೆ. ಈಗಾಗಲೇ ಹೇಳಿರುವಂತೆ ಪದೋನ್ನತಿ ಪಡೆದವರಿಗೆ ನೇರ ನೇಮಕಾತಿಯ ಧೇಯಾಂಶವನ್ನು ನೀಡುವ ಪ್ರಶ್ನೆ ಉದಭವಿಸುವುದಿಲ್ಲ ಅಂತ ಹೇಳಿದ್ದೀರಿ. ಹಾಗಾದರೆ ಸರ್ಕಾರೀ ನೌಕರಿಗೆ ಸೇರಿರತಕ್ಕಂಥಾವರ ಪೂರ್ಣ ಚರಿತ್ರೆ ಅವರ ಎಸ್.ಆರ್ ನಲ್ಲಿ ಎಂಟ್ರಿಯಾಗಿರುತ್ತೆ. ಅವರವರ ಕಾಲ ಕಳೆದಂತೆ ನೇರ ನೇಮಕಾತಿ ಇದ್ದ ಹಾಗೆ ನೇರವಾಗಿ ಅವರಿಗೆ ಪ್ರಮೋಷನ್ ಬರುವುದಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಈಗಾಗಲೇ ಉನ್ನತ ನ್ಯಾಯಾಲಯ ಒಂದು ಆದೇಶ ಕೊಟ್ಟಿದೆ. ಅದರ ಪ್ರಕಾರ ಒಂದು ಡ್ರಾಫ್ಟ್ ಮಾಡಿ ಸೀನಿಯಾರಿಟಿ ಲಿಸ್ಟ್ ಅನ್ನು ತಯಾರು ಮಾಡಿದ್ದೇವೆ ಮತ್ತು ಅದರ ಬಗ್ಗೆ ಅಬ್ಜಕ್ಷನ್ ಕೂಡ ಕರೆದಿದ್ದೇವೆ. ೪೦೦ ಮಂದಿ ಅದರ ಬಗ್ಗೆ ಆಕ್ಷೇಪಣೆ ಕೊಟ್ಟಿದ್ದಾರೆ. ಅದನ್ನು ನಾವು ಫೈನಲೈಸ್ ಮಾಡುತ್ತಿದ್ದೇವೆ. ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅವರ ಉದ್ದೇಶ ಈಗ ಸಫಲವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಜಿ. ಕೆ. ಸಂಬ್ಬಯ್ಯ.—ಸರ್ಕಾರೀ ಸೇವೆಯಲ್ಲಿ ಸೇರಿದವರಿಗೆ ಅವರ ಸೀನಿಯಾರಿಟಿ ಲಿಸ್ಟ್ ಅನ್ನು ಮಾಡುತ್ತೀರಲ್ಲಾ, ಅದನ್ನು ಯಾವ ಆಧಾರದ ಮೇಲೆ ಪರಿಗಣಿಸುತ್ತೀರಾ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ. ಈಗಾಗಲೇ ನಾನು ಹೇಳಿದಂತೆ ಆ ರಿಟ್ ಪಿಟಿಷನ್ಸ್‌ನಲ್ಲಿ ಕೆಲವು ವಿಚಾರಗಳನ್ನು ನಮೂದಿಸಿದ್ದಾರೆ, ಹೈಕೋರ್ಟ್‌ನವರು ನಮಗೆ ಯಾವ ಒಂದು ಆದೇಶ ಕೊಟ್ಟಿದ್ದಾರೋ ಅದರ ಪ್ರಕಾರ ೨೭-೩-೭೬ರಂದು ಒಂದು ಲಿಸ್ಟ್ ಅನ್ನು ಪಬ್ಲಿಷ್ ಮಾಡಿದ್ದೇವೆ. ನಂತರ ಅದನ್ನು ಸ್ವಲ್ಪ ಮಾಡಿಫೈ ಮಾಡಿ ಒಂದು ಡ್ರಾಫ್ಟ್ ನೋಟಿಫಿಕೇಷನ್ ಅನ್ನು ೨೭-೪-೧೯೮೨ ರಂದು ಇಷ್ಟೊ ಮಾಡಿದ್ದೇವೆ. ಆ ಡ್ರಾಫ್ಟ್ ನೋಟೀಫಿಕೇಷನ್ ಬಗ್ಗೆ ಅಬ್ಜಕ್ಷನ್ ಕೊನೇ ದಿವಸ ಅಂದರೆ ೧೦-೬-೮೨ ರಂದು ಎಂದು ಇದೆ. ಆ ಬಗ್ಗೆ ಆಕ್ಷೇಪಣೆಗಳೂ ಸಹ ಬಂದಿವೆ. ಆದುದರಿಂದ ಕೋರ್ಟಿನ ಆದೇಶ ಯಾವ ರೀತಿ ಇದೆಯೋ ಆ ರೀತಿಯಾಗಿ ಮಾಡಿದ್ದೇವೆ. ಯಾವ್ಯಾವ ರೀಟ್ ಪಿಟಿಷನ್‌ಗೆ ಏನೇನು ಆದೇಶ ಕೊಟ್ಟಿದ್ದಾರೋ ಬೇರೆ ಬೇರೆ ವಿಚಾರಗಳಲ್ಲಿ ಯಾವ್ಯಾವರೀತಿಯಾಗಿ ಆದೇಶ ಕೊಟ್ಟಿದ್ದಾರೋ ಅದರಂತೆ ಅವರಿಗೆ ಪ್ರಮೋಷನ್ಸ್ ಕೊಡಬೇಕಾಗುತ್ತದೆ.

SRI A. LAKSHMISAGAR.—Sir, in the light of the High Court order, the fears expressed by the affected persons are that the provisional list was not in confrmity with the directions of the High Court ; that is the main grievance of the affected persons. May I ask the Hon. Minister to take into consideration the representations filed by way of objections to the provisional list made by the Government and see that a final decision is taken in accordance with the Order of the High Court.

SRI M. VEERAPPA MOILY.—We have published the draft notification taking into account the observations made by the High Court in various writ petitions filed before it. That is how the draft notification has been published and we have received as many as 400 representations on the basis of the draft notification. Of course, the leader of the Opposition has raised the apprehension that while preparing the draft notification some of the directions of the High Court have not been taken into consideration. We will definitely go into all aspects of the directions of the High Court and also representations made by the agrieved persons. After thoroughly examining all aspects we will arrive at a final decision.

SRI A. LAKSHMISAGAR.—Will the Government consult the Law Department in this behalf.

SRI M. VEERAPPA MOILY.—Definitely

ಶ್ರೀ ಜಿ. ಕೆ. ಸುಬ್ಬಯ್ಯ.—ಅಧ್ಯಕ್ಷರೇ, ಈ ಪ್ರಮೋಷನ್ ಕೊಡುವಾಗ ಸಾಮಾನ್ಯ ಎರಡು ಆಧಾರಗಳನ್ನು ಉಪಯೋಗಿಸುತ್ತಾರೆಂದು ನನ್ನ ಅಭಿಪ್ರಾಯ ಮೊದಲನೇದು ಒಬ್ಬ ನೌಕರ ಕೆಲಸಕ್ಕೆ ಸೇರಿದ ದಿನ, ಎರಡನೇದು ಮತ್ತೊಬ್ಬ ಅವನ ವಯಸ್ಸು ಹೆಚ್ಚಾಗಿದ್ದರೆ ಅದನ್ನು ಸಿನಿಯಾರಿಟಿ ಪ್ರಕಾರ ಸೇರಿಸಿ ಅದಕ್ಕೆ ಹೆಚ್ಚಿನ ಮಾಹಿತಿ ಕೊಟ್ಟು ಪ್ರಮೋಷನ್ ಕೊಡುವ ಹಾಗೆ ಸರ್ಕಾರದ ನಿಯಮಾವಳಿಯಲ್ಲಿ ಇಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ರಮೋಷನ್ ಯಾವರೀತಿ ಮಾಡಬೇಕು ಅನ್ನುವುದರ ಬಗ್ಗೆ ಈಗಾಗಲೇ ರೂಲ್ಸ್ ಫೈನಲೈಸ್ ಆಗಿದೆ. ನಿಯಮಾವಳಿ ಪ್ರಕಾರ ಅದನ್ನೂ ಮಾಡಬೇಕಾಗುತ್ತದೆ, ಒಂದುವೇಳೆ ಡ್ರಾಫ್ಟ್ ನೋಟಿಫಿಕೇಷನ್‌ನಲ್ಲೂ ಏನಾದರೂ ಬದಲಾವಣೆಮಾಡಬೇಕಾಗಿದ್ದರೂ ಕೂಡ In the light of the present rules. High Court order given by the affected persons ಅವರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ನಾವು ಮಾಡಿಯೇ ಮಾಡ ಬೇಕಾಗುತ್ತದೆ.

ಶ್ರೀ ಜಿ. ಕೆ. ಸುಬ್ಬಯ್ಯ.—ಹಾಗೆ ಮಾಡಿದರೆ ಅನೇಕ ನೌಕರರಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಅವರಿಗೆ ತೊಂದರೆಯಾಗಬಾರದು ಅನ್ನುವ ದೃಷ್ಟಿಯಿಂದಲೇ ನಾವು ಒಂದು ಡ್ರಾಫ್ಟ್ ನೋಟಿಫಿಕೇಷನ್ ಅನ್ನು ಪಬ್ಲಿಷ್ ಮಾಡಿದ್ದೇವೆ. ಆದ್ದರಿಂದ ಯಾವರೀತಿ ಯಾಗಿ ತೊಂದರೆಯಾಗುತ್ತದೆ ಎಂದು ಕೆಲವರು ಆಕ್ಷೇಪಣೆ ಕೊಟ್ಟಿದ್ದಾರೆ. ಆ ಆಕ್ಷೇಪಣೆಗಳೆಲ್ಲವನ್ನೂ ನಾವು ಪರಿಗಣನೆಗೆ ತೆಗೆದುಕೊಂಡು ಯಾರಿಗೂ ಅನ್ಯಾಯವಾಗದಂತೆ ನಾವು ಆಬೈರ್ ಆಗಿ ಪಬ್ಲಿಷ್ ಮಾಡಬೇಕಾಗುತ್ತದೆ.

Crushing Capacity of M. K. Hubli Co-operative Sugar Factory

524. SRI P. A. PAWASHE (Uchagaon)—Will the Chief Minister be pleased to state.—

(a) the total extent of sugarcane growing area from Khanapur, Bailhongal and Belgaum taluk is reserved only for M. K. Hubli Co-operative Sugar Factory (talukwise details may be given) ;

(b) the sugarcane crushing capacity of this factory (details in tonnes may be given) ;

(c) the total tonnage of sugarcane crushed by this factory during the last season (talukwise details may be given) ;

(d) the total yield of sugarcane per acre in these three taluks ?

SRI R. GUNDU RAO [Chief Minister].—

(a) Extent of sugarcane area reserved for the factory is 28,606 acres and 78 guntas.

		Acres-Guntas
1) Khanapur	...	8,913.00
2) Bailhongal	...	9,860.16
3) Belgaum	...	9,080.26
4) Saundatti	...	753.36
		28,607.38